ಪ್ರಮಾಣ ವಚನ ಬೋಧಿಸಿದ ದಿನಾಂಕಃ **08.09.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ವಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಕೆ.ಎಂ. ವಕೀಲರಿಂದ**

ದಾವಾ ಆಸ್ತಿಯ ಖಾತಾ ನಂಬರ್ ಗೊತ್ತು. ನಿವೇಶನ ಸಂಖ್ಯೆಃ**26,** ಖಾತಾ ನಂ.**1302/1/4902.** ನಾನು ಹಾಜರುಪಡಿಸಿದ **4** ಕ್ರಯಪತ್ರಗಳಲ್ಲಿ ಅದೇ ಖಾತೆ ನಂಬರ್ ಇದೆ ಎಂದರೆ ಇರಬಹುದು. ಸದರಿ **4** ಕ್ರಯಪತ್ರಗಳಲ್ಲಿ ಅದರ ವಿಸ್ತೀರ್ಣ ಪೂರ್ವ – ಪಶ್ಚಿಮ – **40** ಅಡಿಗಳು ಮತ್ತು ಉತ್ತರ – ದಕ್ಷಿಣ **–30** ಅಡಿಗಳು ಇರುತ್ತದೆ. ನನ್ನ ಕ್ರಯಪತ್ರದಲ್ಲಿ ನಿವೇಶನ ಸಂಖ್ಯೆಃ**26** ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಎಲ್ಲಾ ಕ್ರಯಪತ್ರಗಳಲ್ಲಿ ಅದೇ ಸಂಖ್ಯೆಯನ್ನು ತೋರಿಸಲಾಗಿದೆ ಎಂದು ಹೇಳುತ್ತಾರೆ. ನನ್ನ ಕ್ರಯಪತ್ರದಲ್ಲಿ ನಿವೇಶನ ಸಂಖ್ಯೆಃ**26** ಎಂದು ನಮೂದಾಗಿದೆ ಆದರೆ ಉಳಿದ ಕ್ರಯಪತ್ರಗಳಲ್ಲಿ ಯಾವ ನಿವೇಶನ ಸಂಖ್ಯೆ ನಮೂದಾಗಿದೆ ಎಂದು ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಲಕ್ಷ್ಮಮ್ಮನವರ ಹೆಸರಿಗೆ ಕ್ರಯವಾದ ಪತ್ರದಲ್ಲಿ ತಪ್ಪಾಗಿ ನಿವೇಶನ ಸಂಖ್ಯೆಃ**26** ಎಂದು ನಮೂದಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ತಿಮ್ಮಯ್ಯನವರು ತಿದ್ದುಪಡಿ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ.

ಸಿದ್ದಪ್ಪನವರಿಗೆ **1994** ರಲ್ಲಿ ಕ್ರಯವಾಗಿರುತ್ತದೆ. ಸದರಿ ಕ್ರಯಪತ್ರದಲ್ಲಿ ಇದೇ ಖಾತೆ ನಂಬರ್ ನಮೂದಾಗಿದೆಯಾ ಎಂದರೆ ಹೌದು. ನನ್ನ ಕ್ರಯಪತ್ರದಲ್ಲಿ ಸರ್ವೆ ನಂಬರ್ ನಮೂದಾಗಿಲ್ಲ. ದಾವಾ ಆಸ್ತಿಯನ್ನು ಯಾರು ಮುನಿಸಿಪಾಲ್ ವ್ಯಾಪ್ತಿಗೆ ತಂದಿದ್ದಾರೆ ಎಂದರೆ ಸಾಕ್ಷಿಯು ತಿಮ್ಮಯ್ಯನವರೇ ಮುನಿಸಿಪಾಲ್ ವ್ಯಾಪ್ತಿಗೆ ಸೇರಿಸಿದ್ದಾರೆಂದು ಹೇಳುತ್ತಾರೆ. ಭೂ ಪರಿವರ್ತನೆ ಪ್ರಮಾಣ ಪತ್ರ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಕಟ್ಟಿದ ಶುಲ್ಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ

ಸಾಕ್ಷಿಯು ದಾವಾ ಆಸ್ತಿಯು **1988** ರ ಪೂರ್ವದಲ್ಲಿ ನಗರಸಭೆ ವ್ಯಾಪ್ತಿಗೆ ಸೇರಿರುವ ಕಾರಣ ಭೂ ಪರಿವರ್ತನೆ ಮಾಡಿಸುವ ಅಗತ್ಯ ಇಲ್ಲವೆಂದು ನಗರಸಭೆಯವರು ತಿಮ್ಮಯ್ಯನವರ ಹೆಸರಿಗೆ ಖಾತೆ ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಹಿಂಬರಹವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ತಿಮ್ಮಯ್ಯನವರು ಒಟ್ಟು ಎಷ್ಟು ನಿವೇಶನಗಳನ್ನಾಗಿ ಮಾಡಿದ್ದರು ಎಂದರೆ ಗೊತ್ತಿಲ್ಲ. ಅವುಗಳ ಪೈಕಿ ಎಷ್ಟು ನಿವೇಶನಗಳಿಗೆ ಅಭಿವೃದ್ದಿ ತೆರಿಗೆ ಕಟ್ಟಿದ್ದರು ಎಂದರೆ ಗೊತ್ತಿಲ್ಲ. ಅಭಿವೃದ್ದಿ ತೆರಿಗೆ ಕಟ್ಟಿಸಿಕೊಳ್ಳಬೇಕಾದರೆ ನಗರಸಭೆಯಿಂದ ರೆಜ್ಯೂಲೂಷನ್ ಆಗಬೇಕು ಎಂದರೆ ಸಾಕ್ಷಿಯು **1988** ರ ಪೂರ್ವದಲ್ಲೇ ಅಭಿವೃದ್ಧಿ ಶುಲ್ಕವನ್ನು ಪಡೆದು ನಗರಸಭಾ ವ್ಯಾಪ್ತಿಗೆ ಸೇರಿಸಿರುವ ಕಾರಣ ರೆಜ್ಯೂಲೂಷನ್‌ನ ಅಗತ್ಯ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ಅಧಿಕಾರಿಗಳು ರೆವಿನ್ಯೂ ನಿವೇಶನಗಳನ್ನು ಭೂ ಪರಿವರ್ತನೆ ಮಾಡದೇ ನಗರಸಭಾ ವ್ಯಾಪ್ತಿಗೆ ಸೇರಿಸಿಕೊಂಡರೆ ಸದರಿ ಅಧಿಕಾರಿಗಳಿಗೆ ಕಲಂ **95** ಕರ್ನಾಟಕ ಭೂ ಕಂದಾಯ ಕಾಯ್ದೆಯ ಪ್ರಕಾರ ಶಿಕ್ಷಾರ್ಹ ಅಪರಾಧವಾಗುತ್ತದೆ ಎಂದರೆ ಸರಿಯಲ್ಲ. ತಿಮ್ಮಯ್ಯನವರು ಯಾರಿಗೂ ಕೂಡ ನಿವೇಶನಗಳನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಅಕ್ಕ–ಪಕ್ಕದ ನಿವೇಶನಗಳನ್ನು ಕೂಡ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಮುನಿಸಿಪಾಲ್ ಅಧಿಕಾರಿಗಳ ಮೇಲೆ ನನ್ನ ಪ್ರಭಾವ ಬೀರಿ ಎಲ್ಲಾ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ರಿಜಿನಲ್ ಕಮೀಷನರ್ ರವರ ಮುಂದೆ ನಗರಸಭೆಯವರು ಏನಾದರೂ ಅರ್ಜಿ ಸಲ್ಲಿಸಿದ್ದಾರಾ ಎಂದರೆ ಗೊತ್ತಿಲ್ಲ. ನೀವೇನಾದರೂ ಕ್ರಮ ಜರುಗಿಸಿದ್ದೀರಾ? ಎಂದರೆ ಸಾಕ್ಷಿಯು ನನಗೆ ಹಿಂಬರಹ ನೀಡಿದ ನಂತರ ನಾನು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿದ್ದೇನೆ ಎಂದು ಹೇಳುತ್ತಾರೆ. ನನ್ನ ವಿರುದ್ದ **1**ನೇ ಪ್ರತಿವಾದಿಯು ದೂರು ಕೊಟ್ಟಿದ್ದು, ಅದರಂತೆ ಸಿ.ಸಿ.ನಂ.**93/2023** ರಲ್ಲಿ ಕೇಸು ದಾಖಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸ್ವಾಧೀನಕ್ಕೆ **1**ನೇ ಪ್ರತಿವಾದಿಯು ತೊಂದರೆ ಕೊಟ್ಟ ನಂತರ ನಾನು ಅವರ ವಿರುದ್ದ ಕೇಸು ದಾಖಲಿಸಿದ ನಂತರ ಅವರು ನನ್ನ ವಿರುದ್ದ ಕೌಂಟರ್ ಕೇಸ್ ಹಾಕಿದ್ದಾರೆ ಎಂದು ಹೇಳುತ್ತಾರೆ. ನಾನು

ದಾವಾ ಆಸ್ತಿಯ ಮಾಲೀಕನಲ್ಲ ಹಾಗೂ ನಾನು ಈ ದಾವೆಯಲ್ಲಿ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.